ಬುಧವಾರ, 30 ಅಕ್ಟೋಬರ್ 2024 ಆಂದೋಲನ

# ಕರಾಟೆ, ಕಿಕ್‌ಬಾಕ್ಸಿಂಗ್ ಸ್ಪರ್ಧೆ; ಎಟಿಎಂಇ ವಿದ್ಯಾರ್ಥಿಗಳ ಸಾಧನೆ



ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಆಯೋಜಿಸಿದ್ದ 2024–25ನೇ ಸಾಲಿನ ನಗರ ಅಂತರ ಕಾಲೇಜು ಕ್ರೀಡಾಕೂಟದ ಕರಾಟೆ ಹಾಗೂ ಕಿಕ್ ಬಾಕ್ಸಿಂಗ್ ಚಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ಬನ್ನೂರು ರಸ್ತೆಯಲ್ಲಿರುವ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಮೂರು ಚಿನ್ನದ ಪದಕ, ಒಂದು ಬೆಳ್ಳಿ ಹಾಗೂ ಎರಡು ಕಂಚಿನ ಪದಕಗಳನ್ನು ಗಳಿಸಿದ್ದಾರೆ.

ಕರಾಟೆ ಸ್ಪರ್ಧೆಯಲ್ಲಿ ಕಾಲೇಜಿನ ವಿದ್ಯಾರ್ಥಿಗಳಾದ ಎಸ್.ಲೋಕೇಶ್, ಎಂ.ಎಂ.ನಿಖಿಲ್ ಕುಮಾರ್, ಎ. ಸ್ಯಾಮ್ಯುಯಲ್ ಅವರು ಚಿನ್ನದ ಪದಕ, ಕಿಕ್ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಮೋಹಿತ್ ಕೃಷ್ಣ ಅವರು ಬೆಳ್ಳಿ ಪದಕ ಹಾಗೂ ಆರ್.ಧೀರಜ್‌ರಾವ್ ಮತ್ತು ತಸ್ಪಿಯಾಟಸ್ಕಿನ್ ಅವರು ಕಂಚಿನ ಪದಕಗಳಿಸಿದ್ದು, ಇವರನ್ನು ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.